

ಪದ್ಮಾ ಶ್ರೀರಾಮ್ ಅವರೊಂದಿಗೆ ಸಂದರ್ಶಕಿ

ಸಿಕ್ತು ಅಂತ ಇವತ್ತಿಗೂ ಸಂತೋಷ ನಂಗೆ.

ಇನ್ನೊಂದು ತಮಾಷೆ ಹೇಳ್ತೀನಿ: ಒಂದು ಸರ್ತಿ ನನಗೆ ಕುವೆಂಪು ಅವರನ್ನ ಮುಟ್ಟಬೇಕು ಅಂತ ತುಂಬ ಆಸೆ ಆಯ್ತು. ಆ ಹೊತ್ತಿಗಾಗಲೆ ಅವರು ವೀಲ್‌ಚೇರ್‌ನಲ್ಲಿ ಓಡಾಡುವಷ್ಟು ಸೊರಗಿದ್ದರು. ಅವರನ್ನು ಮೇರಿಯಮ್ಮ ಅನ್ನೋ ಒಬ್ಬ ನರ್ಸ್ ಬಹಳ ಚೆನ್ನಾಗಿ ನೋಡಿಕೊಳ್ತಾ ಇದ್ರು. ಒಂದು ದಿನ ಬೆಳಗ್ಗೆ ಸುಮಾರು ಹನ್ನೊಂದು ಗಂಟೆ ಹೊತ್ತಿಗೆ ಅವರ ಮನೆಗೆ ಹೋದೆ. ತಾರಿಣಿ ಅವರು ಬ್ಯಾಂಕ್‌ಗೆ ಹೋಗಿದ್ದರು. ಕುವೆಂಪು ಅವರು ಮಲಗಿದ್ದರು. ಅವರ ಮುಖ ತುಂಬ ಶಾಂತವಾಗಿತ್ತು, ಮಗುವಿನ ಹಾಗೆ. ನಾನು ಅವರ ಹಣೆಯನ್ನು ಸವರಿದೆ, ತಲೆ ಸವರಿದೆ. ಅವರು ಮಲಗೇ ಇದ್ರು, ಎಚ್ಚರ ಆಗಲಿಲ್ಲ. ಕುವೆಂಪು ಅವರ ಸಹಾಯಕ್ಕಿದ್ದ ದಾಸೇಗೌಡ ಅನ್ನುವವರು ಬಂದ್ರು. ನನ್ನನ್ನ ನೋಡಿ ಅವರೂ ಕುವೆಂಪು ಅವರ ತಲೆ ಸವರಿದರು. ಇದು ಒಂಥರಾ ಧನ್ಯತಾ ಭಾವ.

1982ರಲ್ಲಿ ಕುವೆಂಪುರವರ ಪತ್ನಿ ಹೇಮಾವತಿಯವರು ಬೆಂಗಳೂರಿನಲ್ಲಿ ತೀರಿಕೊಂಡರು. ಅವರ ದೇಹವನ್ನು ತೇಜಸ್ವಿ, ಕುವೆಂಪು ಅವರ ಜೊತೆ ಮೈಸೂರಿಗೆ ತಂದರು. ಅವರು ಕೊಟ್ಟ ಸೂಚನೆ ಪ್ರಕಾರ ವಿದ್ಯುತ್ ಚಿತಾಗಾರದಲ್ಲಿ ಸಂಸ್ಕಾರದ ಸಿದ್ಧತೆಗಳು ನಡೆದಿದ್ದವು. 'ಉದಯರವಿ' ಮನೆಯ ನಡುಕೋಣೆಯಲ್ಲಿ ಮಂಚವನ್ನು ಆಗಲೇ ಸಿದ್ಧಗೊಳಿಸಿದ್ದರು. ಅವರುಗಳೆಲ್ಲ ಬರೋ ಮೊದಲೇ, ಪ್ರಭುಶಂಕರ್, ಶಾಂತಾ ಪ್ರಭುಶಂಕರ್ ಮತ್ತು ನಾನು, ಶ್ರೀರಾಮ್ ಅಲ್ಲಿ ಇದ್ದೆವು. ಮನೆಯಲ್ಲೆಲ್ಲ ಅದೆಂಥಾ ನೀರವ ಮೌನ ಅಂತೀರಾ... ಸ್ವಲ್ಪ ಹೊತ್ತಿಗೆ ಕುವೆಂಪು ಬಂದರು. ಹೇಮಾವತಿಯವರನ್ನು ಮಂಚದ ಮೇಲೆ ಮಲಗಿಸಿದರು. ಕುವೆಂಪು ಅವರು ಆಯಾಸ ಪರಿಹರಿಸಿಕೊಳ್ಳೋಕೆ ತಮ್ಮ ಕೋಣೆಗೆ ಹೋದರು. ಸ್ವಲ್ಪ ಹೊತ್ತಿನ ಮೇಲೆ ಅವರು ಈಚೆ ಬಂದು ನಡುಕೋಣೆಯಲ್ಲಿದ್ದ ಕುರ್ಚಿಯಲ್ಲಿ ಕುಳಿತು ಬಹಳ ಮೆಲ್ಲಗೆ ಶ್ಲೋಕಗಳನ್ನು ಹೇಳಿಕೊಳ್ಳತೊಡಗಿದರು. ಕೋಣೆಯ ಒಂದು ಕಡೆಯಲ್ಲಿ ನಾನು ಮತ್ತು ಶ್ರೀರಾಮ್ ನಿಂತಿದ್ದೆವು, ಇನ್ನೊಂದು ಬದಿಯಲ್ಲಿ ಜಿ.ಎಚ್. ನಾಯಕರಿದ್ದರು. ಅದುವರೆಗೆ ಅಲ್ಲೇ ನಿಂತಿದ್ದ ರಾಜೇಶ್ವರಿಯವರು ಏನಕ್ಕೋ ಮನೆಯ ಒಳ ಹೋದರು. ಅದೇಕೋ ಜಿ.ಹೆಚ್. ನಾಯಕರು ನಡುಕೋಣೆಯಿಂದ ಹೊರಗಡೆಗೆ ಹೋದರು. ಇನ್ನೊಬ್ರು... (ಅವರು ಯಾರು ಅಂತ ನೆನಪಾಗ್ತಾ